## ನಗರಾಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ವ್ಯಾಪ್ತಿ

1035 (1262) - ಶ್ರೀ ಹಂಪನಗೌಡ ಬಾದರ್ಲಿ, (ಸಿಂಧನೂರು) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಟೌನ್ ಪ್ರಾಧಿಕಾರಕ್ಕೆ ಬಡಾವಣೆಗಳನ್ನು ರಚಿಸುವ ಅಧಿಕಾರ ಇದೆಯೇ: ಅಥವಾ ಇದಕ್ಕಾಗಿ ರಾಜ್ಯ ಸರ್ಕಾರದ ಪರವಾನಿಗೆಯ ಅವಶ್ಯಕತೆ ಇದೆಯೇ: ಪ್ರಾಧಿಕಾರದ ಅಧಿಕಾರ ವ್ಯಾಪ್ತಿ ಏನು?

ಆ) ಸಿಂಧನೂರಿನ ನಗರ ಪ್ರಾಧಿಕಾರ ಎಷ್ಟು ಬಡಾವಣೆಗಳಲ್ಲಿ ಲೇಔಟ್ ಮಾರ್ಪಾಡು ಮಾಡಲಾಗಿದೆ (ವಿವರ ನೀಡುವುದು)?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ನಗರ ಯೋಜನಾ ಪ್ರಾಧಿಕಾರಗಳು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪರಿಚ್ಛೇದ 26 ರ ಅಡಿಯಲ್ಲಿ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದಿಂದ ನಂತರವೇ ಬಡಾವಣೆಗಳನ್ನು ರಚಿಸುವ ಅಧಿಕಾರ ಹೊಂದಿರುತ್ತದೆ. ನಗರ ಯೋಜನಾ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯ ವಿವರಗಳು ಈ ಕೆಳಕಂಡಂತಿವೆ:-

1) ಸ್ಥೂಲಾಭಿವೃದ್ಧಿ ಯೋಜನೆ ವ್ಯಾಪಕಾಭಿವೃದ್ಧಿ ಯೋಜನೆ ತಯಾರಿಸುವುದು.
2) ಅನುಮೋದಿತ ಯೋಜನೆಗಳ ವಲಯ ನಿಯಮಾವಳಿಗಳನ್ನು ಕಾರ್ಯಾಚರಣೆಗೆ ತರುವುದು.
3) ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಪರಿಚ್ಛೇದ 14 'ಎ' ರ ಅಡಿಯಲ್ಲಿ ಭೂ ಬದಲಾವಣೆ ಪ್ರಕ್ರಿಯೆ, ಕಟ್ಟಡ ಮತ್ತು ಖಾಸಗಿ ಬಡಾವಣೆಗಳಿಗೆ ಕಾಯ್ದೆಯ ಪರಿಚ್ಛೇದ 17ರನ್ವಯ ಅನುಮೋದನೆ ನೀಡುವುದು.
4) ವಿವಿಧ ಇಲಾಖೆಗಳಿಗೆ ಯೋಜನಾ ವಿಷಯಗಳಲ್ಲಿ ತಾಂತ್ರಿಕ ನೆರವು ನೀಡುವುದು.

ಆ) ಸಿಂಧನೂರು ನಗರಯೋಜನಾ ಪ್ರಾಧಿಕಾರವು ಕೆಳಕಂಡ 3 ಲೇ ಔಟ್‌ಗಳನ್ನು ರಚಿಸಿದೆ.

1) ಸಿಂಧನೂರು ಗ್ರಾಮದ ರಿ: ಸ:ನಂ:777
2) ಸಿಂಧನೂರು ಗ್ರಾಮದ ರಿ:ಸ:ನಂ:777-1ಬಿ
3) ಸಿಂಧನೂರು ಗ್ರಾಮದ ರಿ:ಸ:ನಂ:777-1ಸಿ

## ಅಬಕಾರಿ ಇಲಾಖೆಯಿಂದ ಬಂದ ಆದಾಯ

1039 (486) - ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 1999-2000, 2000-01, 2001-02ನೇ ಸಾಲಿನಲ್ಲಿ ಅಬಕಾರಿ ಇಲಾಖೆಯಿಂದ ಬಂದ ಆದಾಯ ಎಷ್ಟು: ಜಿಲ್ಲಾವಾರು ವಿವರ ನೀಡುವುದು.

ಆ) ರಾಜ್ಯದಲ್ಲಿ ಸೆಕೆಂಡ್ಸ್ ಹಾವಳಿ ತಡೆಗಟ್ಟಲು ಸರಕಾರ ಕೈಗೊಂಡ ಕ್ರಮವೇನು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ವಿವರಗಳು ಕೆಳಕಂಡಂತಿರುತ್ತವೆ:-

(ಕೋಟಿ ರೂ.ಗಳಲ್ಲಿ)

| | | |
|---|---|---|
| 1999-2000 | - | 1233.55 |
| 2000-2001 | - | 1550.23 |
| 2001-2002 | - | 2004.11 |

(ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ)

ಆ) ಸರ್ಕಾರ ಚೆಕ್‌ಪೋಸ್ಟ್‌ಗಳನ್ನು ಹುಬ್ಬಳ್ಳಿ ನಗರದ ಆಸುಪಾಸಿನಲ್ಲಿ ನಿರ್ಮಿಸಿದೆ ಜಾರಿ, ತನಿಖೆ ಮತ್ತು ರಸ್ತೆಗಾವಲನ್ನು ಚುರುಕುಗೊಳಿಸಿ 2001-02ನೇ ಸಾಲಿಗೆ 18655 ಮೊಕದ್ದಮೆಗಳನ್ನು ದಾಖಲಿಸಿ 1594 ವಾಹನಗಳು 22.58 ಲಕ್ಷ ಲೀಟರ್ ಅಕ್ರಮ ಮದ್ಯ ಮತ್ತು 4.90 ಲಕ್ಷ ಲೀಟರ್ ಮದ್ಯಸಾರವನ್ನು ವಶಪಡಿಸಿಕೊಂಡು 1435 ಜನ ಆರೋಪಿಗಳನ್ನು ಬಂಧಿಸಲಾಗಿದೆ. ಇದಲ್ಲದೆ ಸರ್ಕಾರ ಸೆಕೆಂಡ್ಸ್ ಹಾವಳಿ ನಿಯಂತ್ರಣದಲ್ಲಿಡಲು ಪ್ರತಿ ಮದ್ಯದಂಗಡಿಗಳು ಮತ್ತು ಬಾರ್‌ಗಳಲ್ಲಿ ನಿಗದಿತ ಕನಿಷ್ಟ ಪ್ರಮಾಣದಲ್ಲಿ ಮದ್ಯ ಎತ್ತುವಳಿ ಮಾಡಲು ಅಬಕಾರಿ ನಿಯಮಗಳಿಗೆ ತಿದ್ದುಪಡಿ ತರಲಾಗುತ್ತಿದೆ.

**ANNEXURE**

**DISTRICTWISE REVENUE COLLECTION FOR THE YEAR**

1999-00, 2000-01 AND 2001-02

| SL NO | DISTRICTS | 1999-00 | 2000-01 | 2001-02 |
|---|---|---|---|---|
| 1. | B'LORE (U) | 260.44 | 334.02 | 574.26 |
| 2. | B'LORE (R) | 72.08 | 103.41 | 158.39 |
| 3. | BAGALKOTE | 22.93 | 27.57 | 33.41 |
| 4. | BELGAUM | 62.64 | 76.27 | 98.79 |
| 5. | BELLARY | 56.68 | 63.22 | 76.35 |
| 6. | BIDAR | 30.68 | 35.28 | 45.58 |
| 7. | BIJAPUR | 19.67 | 23.14 | 29.11 |
| 8. | C'R'NAGAR | 16.63 | 25.50 | 23.90 |
| 9. | C' MAGALUR | 27.03 | 37.31 | 41.33 |
| 10. | C' DURGA | 22.85 | 30.47 | 31.78 |
| 11. | D' KANNADA | 63.71 | 80.54 | 89.65 |
| 12. | DAVANGERE | 32.95 | 41.14 | 54.88 |
| 13. | DHARWAR | 30.47 | 36.91 | 52.65 |
| 14. | GADAG | 11.11 | 12.23 | 12.63 |
| 15. | GULBARGA | 56.65 | 70.16 | 61.82 |
| 16. | HASSAN | 33.43 | 42.75 | 53.45 |
| 17. | HAVERI | 26.31 | 31.73 | 34.85 |
| 18. | KODAGU | 31.75 | 36.91 | 34.11 |
| 19. | KOLAR | 41.20 | 50.02 | 56.51 |

| 1 | 2 | 3 | 4 | 5 |
|---|---|---|---|---|
| 20. | KOPPAL | 17.81 | 24.03 | 26.29 |
| 21. | MANDYA | 50.67 | 64.64 | 68.67 |
| 22. | MYSORE | 69.54 | 92.96 | 107.76 |
| 23. | RAICHUR | 34.38 | 39.56 | 44.15 |
| 24. | SHIMOGA | 35.85 | 45.85 | 47.92 |
| 25. | TUMKUR | 42.42 | 53.10 | 61.07 |
| 26. | UDUPI | 37.62 | 42.66 | 54.64 |
| 27. | U'KANNADA | 26.05 | 28.85 | 30.16 |
| | TOTAL | 1233.55 | 1550.23 | 2004.11 |

**ಸಣ್ಣ ಉಳಿತಾಯ ಮತ್ತು ಲಾಟರಿಯಿಂದ ಸಂಗ್ರಹಿಸಿದ ಮೊತ್ತ**

1042 (1252) - ಶ್ರೀ ಹೊನ್ನೊಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-01, 2001-02, 2002-03ನೇ ಸಾಲಿನಲ್ಲಿ ಸಣ್ಣ ಉಳಿತಾಯ ಮತ್ತು ಲಾಟರಿ ಯೋಜನೆಯಿಂದ ಸಂಗ್ರಹಿಸಿದ ಒಟ್ಟು ಮೊತ್ತವೆಷ್ಟು;

ಆ) ಸದರಿ ಯೋಜನೆಯಡಿಯಲ್ಲಿ ಕಾರ್ಯ ನಿರ್ವಹಿಸಿದ ಏಜೆಂಟರುಗಳು ಎಷ್ಟು ಅವರುಗಳಿಗೆ ಕೊಡಬೇಕಾಗಿರುವ ಕಮಿಶನ್ ಹಣವೆಷ್ಟು?

ಶ್ರೀ ಬಾಬುರಾವ್ ಚಿಂಚನೂರು (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು) :

ಅ) ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಯೋಜನೆಯಡಿಯಲ್ಲಿ ಸಂಗ್ರಹಿಸಿ ಮೊತ್ತದ ವಿವರ ಈ ಕೆಳಕಂಡಂತಿದೆ:

ಸಂಗ್ರಹವಾದ ಮೊತ್ತ (ರೂ. ಕೋಟಿಗಳಲ್ಲಿ)

| ವರ್ಷ | ಸಣ್ಣ ಉಳಿತಾಯ | | ರಾಜ್ಯ ಲಾಟರಿ |
|---|---|---|---|
| | ಒಟ್ಟು | ನಿವ್ವಳ | |
| 2000-01 | 3748.00 | 1601.00 | 9.54 |
| 2001-02 | 3576.58 | 1692.65 | 12.44 |
| 2002-03 | 912.99 | 371.56 | ಈ ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ |
| | (ಜೂನ್ 2002ರ ಅಂತ್ಯದವರೆಗೆ) | | |

ಆ) ಸಣ್ಣ ಉಳಿತಾಯ ಯೋಜನೆಯಡಿಯಲ್ಲಿ ಸುಮಾರು 30,000 ಜನ ಏಜೆಂಟರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಸುಮಾರು ರೂ. 16.73 ಕೋಟಿ ಕಮಿಷನ್ ಹಣವನ್ನು ನೀಡಬೇಕಾಗಿದೆ.